ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್

(ಕರ್ನಾಟಕ ಸರ್ಕಾರದಿಂದ ಅನುದಾನಿತ ಸ್ವಾಯತ್ತ ಹಾಗೂ ಎಐಸಿಟಿಇ ಮಾನ್ಯತೆ ಪಡೆದ ಸಂಸ್ಥೆ)

To :

## 2025-26ನೇ ಸಾಲಿನ ಪ್ರಥಮ ವರ್ಷದ ಡಿಪ್ಲೋಮ ಕೋರ್ಸುಗಳಿಗೆ ಪ್ರವೇಶಾತಿ

### *ಸಂದರ್ಶನ ಪತ್ರ*

2025-26ನೇ ಸಾಲಿನ ಪ್ರಥಮ ವರ್ಷದ ಡಿಪ್ಲೋಮ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಿನಾಂಕದಂದು ಪಾಲಿಟೆಕ್ನಿಕ್‌ನಲ್ಲಿ ಸಂದರ್ಶನವನ್ನು ನಡೆಸಲಾಗುತ್ತದೆ. ಅಗತ್ಯ ದಾಖಲಾತಿಗಳೊಂದಿಗೆ, ಪೋಷಕರ ಜೊತೆಯಲ್ಲಿ ಹಾಜರಾಗಬೇಕೆಂದು ತಿಳಿಸಲಾಗಿದೆ.

| ದಿನಾಂಕ | ವೇಳೆ | ಪ್ರವೇಶಾತಿ ಪ್ರಕ್ರಿಯೆ |
|---|---|---|
| 01-07-2025 | ಬೆಳಗ್ಗೆ 9.00 ಗಂಟೆ | ದಾಖಲಾತಿ ಪರಿಶೀಲನೆ ಮತ್ತು ಪ್ರವೇಶಾತಿ (Document Verification & Admission) |

**<u>ಮಾರ್ಗಸೂಚಿಗಳು / ನಿಯಮಗಳು :</u>**

1. ಎಆರ್, ಸಿಪಿ ಮತ್ತು ಸಿಎಸ್ ಕೋರ್ಸುಗಳಿಗೆ ಅಭ್ಯರ್ಥಿಗಳ ಆಯ್ಕೆಯು ಸರ್ಕಾರದ ಮೆರಿಟ್ / ಮೀಸಲಾತಿ ನಿಯಮಗಳಂತೆ ನಡೆಯುವುದರಿಂದ ನೀವು ಸಂದರ್ಶನದ ವೇಳೆಯಲ್ಲಿ ಲಭ್ಯವಿರುವ ಕೋರ್ಸನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.
2. ಪ್ರವೇಶಾತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
3. ಸಂದರ್ಶನದ ಸಮಯದಲ್ಲಿ ಅಭ್ಯರ್ಥಿಗಳು ಕೆಳಕಂಡ ಮೂಲ ದಾಖಲಾತಿಗಳು ಮತ್ತು **4 ಸೆಟ್ ಜೆರಾಕ್ಸ್ ಪ್ರತಿಗಳನ್ನು** ಸಲ್ಲಿಸಬೇಕು.
   - i. ಕರ್ನಾಟಕ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಗೆ ಸಂಬಂಧಿಸಿದ ಮೂಲ ಅಂಕಪಟ್ಟಿ ಅಥವ ತಾತ್ಕಾಲಿಕವಾಗಿ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಲ್ಪಟ್ಟ ಅಂಕಪಟ್ಟಿ ಪ್ರತಿ.
   - ii. ವರ್ಗಾವಣೆ ಪ್ರಮಾಣ ಪತ್ರ.
   - iii. ಕರ್ನಾಟಕದ ಅಭ್ಯರ್ಥಿಗಳು ಸರ್ಕಾರದಿಂದ ಮಾನ್ಯತೆ ಪಡೆದ ಕರ್ನಾಟಕದಲ್ಲಿನ ಯಾವುದೇ ಶಾಲೆಯಲ್ಲಿ ಒಂದನೆ ತರಗತಿಯಿಂದ ಹತ್ತನೆ ತರಗತಿಯವರೆಗೆ ಕನಿಷ್ಠ 5 ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕು (ಈ ಬಗ್ಗೆ ಸಂಬಂಧಿಸಿದ ಶಾಲೆಗಳಿಂದ ವ್ಯಾಸಂಗ ಪ್ರಮಾಣ ಪತ್ರ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಣ ಪಡೆದು ಪ್ರವೇಶ ಸಮಯದಲ್ಲಿ ಹಾಜರುಪಡಿಸಬೇಕು).
   - iv. ಕನ್ನಡ ಮಾಧ್ಯಮ ಮತ್ತು ಗ್ರಾಮೀಣ ಕೋಟಾದಡಿಯಲ್ಲಿ ಪ್ರವೇಶ ಪಡೆಯಲಿಚ್ಛಿಸುವ ಕರ್ನಾಟಕದ ಅಭ್ಯರ್ಥಿಗಳು ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಕನ್ನಡ ಮಾಧ್ಯಮದಲ್ಲಿ ಒಂದನೆ ತರಗತಿಯಿಂದ ಹತ್ತನೆ ತರಗತಿವರೆಗೆ 10 ವರ್ಷಗಳ ಕಾಲ ವ್ಯಾಸಂಗ ಮಾಡಿರುವುದಕ್ಕೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
   - v. ಜಿಲ್ಲಾ ವೈದ್ಯಾಧಿಕಾರಿಗಳಿಂದ / ಸಂಬಂಧಿಸಿದ ವೈದ್ಯಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಅಭ್ಯರ್ಥಿಗಳ ಪೂರ್ಣ ಭಾವಚಿತ್ರವುಳ್ಳ ವೈದ್ಯಕೀಯ ಪ್ರಮಾಣ ಪತ್ರ / UDID.
   - vi. ಕರ್ನಾಟಕದ ಅಭ್ಯರ್ಥಿಗಳು ಮೀಸಲಾತಿಯಡಿ ಪ್ರವೇಶಾತಿ ಪಡೆಯುವ ಸಂದರ್ಭದಲ್ಲಿ (ಅನ್ವಯಿಸಿದರೆ) ಇತ್ತೀಚಿನ ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.
   - vii. ಹೈದರಾಬಾದ್-ಕರ್ನಾಟಕ ಅಭ್ಯರ್ಥಿಗಳು ಪ್ರವೇಶ ಪಡೆಯಬೇಕಾದರೆ, ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಣ ಪಡೆದು ಪ್ರವೇಶ ಸಮಯದಲ್ಲಿ ಹಾಜರುಪಡಿಸಬೇಕು.

ಪು.ತಿ.ನೋ

viii. ಕರ್ನಾಟಕ ಎಸ್ಎಸ್ಎಲ್ಸಿ ಹೊರತುಪಡಿಸಿ ಇತರೆ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಅರಮನೆ ರಸ್ತೆ, ಬೆಂಗಳೂರು – 560 001 ರವರಿಂದ ***ಅರ್ಹತಾ ಪ್ರಮಾಣ ಪತ್ರ*** (Eligibility Certificate) ವನ್ನು ಪಡೆದು ಪ್ರವೇಶ ಸಮಯದಲ್ಲಿ ಸಲ್ಲಿಸಬೇಕು.

ix. ಕರ್ನಾಟಕೇತರ ಅಭ್ಯರ್ಥಿಗಳು ವಲಸೆ ಪ್ರಮಾಣ ಪತ್ರ (Migration Certificate) ವನ್ನು ಅಧಿಕೃತ ಅಧಿಕಾರಿಗಳಿಂದ ಪಡೆದು ಪ್ರವೇಶಾತಿ ಸಂದರ್ಭದಲ್ಲಿ ಸಲ್ಲಿಸಬೇಕು.

x. ಭಾವಚಿತ್ರಗಳು – 10 (ಪಾಸ್‌ಪೋರ್ಟ್ ಅಳತೆ)

xi. ಆಧಾರ್ ಕಾರ್ಡ್ ಹೊಂದಿದ್ದ ಪಕ್ಷದಲ್ಲಿ ಅದರ ಪ್ರತಿಯನ್ನು ಸಲ್ಲಿಸತಕ್ಕದ್ದು (ಕರ್ನಾಟಕ ಮತ್ತು ಕರ್ನಾಟಕೇತರ ಅಭ್ಯರ್ಥಿಗಳು).

4. ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಸುಮಾರು ರೂ 50,000/– ಗಳ ವಿದ್ಯಾರ್ಥಿವೇತನ ಲಭ್ಯವಿದೆ.

5. ನೀವು ಪ್ರವೇಶಕ್ಕೆ ಆಯ್ಕೆಯಾದಲ್ಲಿ, ಈ ಕೆಳಕಂಡಂತೆ ನಿಗಧಿತ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.

<table>
<tr><th>ಕ್ರ. ಸಂ.</th><th>ಡಿಪ್ಲೋಮ ಕೋರ್ಸುಗಳ ಹೆಸರು</th><th>ಕಾಲೇಜು ಶುಲ್ಕ ಮೊದಲನೆ ವರ್ಷಕ್ಕೆ (ರೂ.)</th><th>ವಿದ್ಯಾರ್ಥಿನಿಲಯದ ಶುಲ್ಕ (ರೂ.)</th></tr>
<tr><td>1.</td><td>ಆರ್ಕಿಟೆಕ್ಚರ್ ಅಸಿಸ್ಟೆಂಟ್‌ಶಿಪ್ (ಎಆರ್)</td><td rowspan="3">ರೂ. 18,656/–</td><td rowspan="8">ರೂ. 19,380/– (ರೂ. 4,000/–ಗಳನ್ನು ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯವನ್ನು ಬಿಡುವ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದು) + ಪ್ರತಿ ಮಾಹೆಯಾನ ಅಂದಾಜು ರೂ. 1,500/–ಮೆಸ್ ಛಾರ್ಜ್ (ಊಟದ ವೆಚ್ಚ) ಪಾವತಿಸಬೇಕಾಗುತ್ತದೆ.</td></tr>
<tr><td>2.</td><td>ಕಮರ್ಷಿಯಲ್ ಪ್ರಾಕ್ಟೀಸ್ (ಸಿಪಿ)</td></tr>
<tr><td>3.</td><td>ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ (ಸಿಎಸ್)</td></tr>
<tr><td>4.</td><td>ಜ್ಯುಯಲರಿ ಡಿಸೈನ್ ಮತ್ತು ಟೆಕ್ನಾಲಜಿ (ಜೆಡಿ)</td><td rowspan="5">ರೂ. 30,731/–ಕರ್ನಾಟಕದ ಅಭ್ಯರ್ಥಿಗಳಿಗೆ ಮತ್ತು ರೂ. 38,081/– ಕರ್ನಾಟಕೇತರ ಅಭ್ಯರ್ಥಿಗಳಿಗೆ</td></tr>
<tr><td>5.</td><td>ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ (ಇಸಿ)</td></tr>
<tr><td>6.</td><td>ಕಂಪ್ಯೂಟರ್ ಅಪ್ಲಿಕೇಷನ್ಸ್ (ಸಿಎ)</td></tr>
<tr><td>7.</td><td>ಅಪರೆಲ್ ಡಿಸೈನ್ & ಫ್ಯಾಬ್ರಿಕೇಷನ್ ಟೆಕ್ನಾಲಜಿ</td></tr>
<tr><td>8.</td><td>ಎಲೆಕ್ಟ್ರಿಕಲ್ ಇಂಜಿನಿಯರಿಂಗ್ & ಎಲೆಕ್ಟ್ರಿಕ್ ವೆಹಿಕಲ್ ಟೆಕ್ನಾಲಜಿ</td></tr>
</table>

6. ಈ ಪತ್ರವು ಕೇವಲ ಸಂದರ್ಶನ ಪತ್ರ ಮಾತ್ರ. ಸಂಸ್ಥೆಯಲ್ಲಿ ಲಭ್ಯ ಸ್ಥಾನಗಳು, ಅರ್ಹತೆ, ನಿಯಮ ಇವುಗಳ ಆಧಾರದ ಮೇಲೆ ಸೀಟುಗಳನ್ನು (ಪ್ರವೇಶಾತಿ) ಹಂಚಿಕೆ ಮಾಡಲಾಗುತ್ತದೆ. ಹಾಗಾಗಿ ಇದು ಸೀಟು ಹಂಚಿಕೆ ಪತ್ರವಲ್ಲ.

ಸೂಚನೆ:

- ಈ ಪಾಲಿಟೆಕ್ನಿಕ್ ಮೈಸೂರು ರೈಲ್ವೆ ನಿಲ್ದಾಣದಿಂದ 6 ಕಿ.ಮೀ. ಮತ್ತು ಮೈಸೂರು KSRTC ಬಸ್ ನಿಲ್ದಾಣದಿಂದ 7 ಕಿ.ಮೀ. ಅಂತರದಲ್ಲಿದೆ.
- ಸಿಟಿ ಬಸ್ ನಿಲ್ದಾಣದಿಂದ : ಬಸ್ ಇಳಿಯುವ ಸ್ಥಳ ಪ್ರೀಮಿಯರ್ ಸ್ಟುಡಿಯೋ (ಹುಣಸೂರು–ಮೈಸೂರು ರಸ್ತೆ) ಅಥವಾ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಆರ್‌ಐಇ ಕಾಲೇಜು, ಟೋಲ್‌ಗೇಟ್, (ಗದ್ದಿಗೆ ರಸ್ತೆ, ಮೈಸೂರು)

ಸ್ಥಳ : ಮೈಸೂರು
ದಿನಾಂಕ : 10-06-2025

ಪ್ರಾಂಶುಪಾಲರು
Principal
JSS Polytechnic for the Differently Abl...
JSS TI Campus, Mysuru-570 006

Scan the QR Code from your mobile to get the Live location of JSS Polytechnic for the Differently Abled, Mysuru

ನಿಮ್ಮ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಮೇಲೆ ಸ್ಕ್ಯಾನ್ ಮಾಡುವುದರ ಮೂಲಕ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನ ಸ್ಥಳ (Location) ದ ಮಾಹಿತಿಯನ್ನು ಪಡೆಯುವುದು.

# JSS POLYTECHNIC FOR THE DIFFERENTLY ABLED

(An Autonomous Institute Aided by the Government of Karnataka & Approved by AICTE)
JSS Technical Institutions' Campus, Mysuru – 570 006.
Phone: 0821-2548315 / 316
**Website :** www.jsspda.org **E-mail:** jsspda@gmail.com


## ADMISSION TO FIRST YEAR DIPLOMA FOR THE YEAR 2025-26

## INTERVIEW CUM SPOT ADMISSION LETTER

With reference to your application for admission to First year Diploma, you are hereby informed to appear before the Selection Committee along with your parents as per the following schedule in the Polytechnic.

| Date | Time | Admission Process |
|---|---|---|
| 01-07-2025 | 9.00 AM | Document Verification and Admission |

### Guidelines for Admission 2025-26

1. The selection of Candidates is based on Merit cum Reservation. Hence, you have to select the programmes available at the time of Interview.
2. The decision of the Selection Committee shall be the final in all the matters concerning admission for the year 2025-26.
3. The candidates are required to bring the following documents in **original** along with 4 sets of xerox copies :

   a) Marks Card of SSLC / 10$^{th}$ Standard or its Equivalent Examination signed by the Head Master / Head Mistress in case of Provisional Marks Card.

   b) Transfer Certificate.

   c) Disability Certificate / UDID.

   d) 6 Passport Size Photographs.

   e) Eligibility Certificate obtained from the Secretary, Board of Technical Examinations, Tantrika Shikshana Bhavana, Palace Road, Bengaluru – 560 001.

   f) Migration Certificate from the concerned state government authorities.

   g) Aadhar Cards candidate and parents.

...2

4. If selected, you are required to get yourself admitted to the programme by paying the prescribed fees as given below :

| *Sl. No.* | *Name of Diploma* | *College Fee Per Year* | *Hostel Fee* |
|---|---|---|---|
| 1. | Architecture Assistantship (AR) | Rs. 18,656/- | Rs.19,380/- including Refundable Deposit of Rs.4,000/- at the time of admission. Mess charges will be approximately Rs.1,500/-per month which has to be paid every month. |
| 2. | Commercial Practice (CP) | | |
| 3. | Computer Science & Engineering (CS) | | |
| 4. | Jewellery Design & Technology (JD) | Rs. 38,081/- | |
| 5. | Electronics & Communication Engineering (EC) | | |
| 6. | Computer Applications (CA) | | |
| 7. | Apparel Design & Fabrication Technology (FT) | | |
| 8. | Electrical Engineering & Electric Vehicle Technology | | |

5. This letter is only an intimation for admission. The institution shall make effort to provide admission to any one of the programmes depending on the merit position of the candidate and availability of the seats in the programmes.

6. Scholarships for eligible students are available upto Rs. 50,000/- from Govt. of India.

**Note:**

- This Polytechnic is located at a distance of about 6 Kms from Mysuru Railway Station and 7 Kms from Mysuru KSRTC Bus Stand.
- Destination bus Stop – from Rural Bus Stand : Premier Studio (Hunsur-Mysuru Road) Destination bus Stop - From City Bus Stand : AIISH (All India Institute of Speech & Hearing) RIE College, Tollgate, Gaddige Road, Mysuru

Place: Mysuru
Date: 10-06-2025

PRINCIPAL
JSS Polytechnic for the Differently Abled
JSS TI Campus, Mysuru-570 006

Scan the QR Code from your mobile to get the Live location of JSS Polytechnic for the Differently Abled, Mysuru.